# ಮಂಗಗಳ ಉಪವಾಸ



ಬಾಳೆಯ ತೋಟದ ಪಕ್ಕದ ಕಾಡೊಳು
ವಾಸಿಸುತ್ತಿದ್ದವು ಮಂಗಗಳು;
ಮಂಗಗಳೆಲ್ಲವು ಒಟ್ಟಿಗೆ ಸೇರುತ
ಒಂದುಪವಾಸವ ಮಾಡಿದವು.

ಏನೂ ತಿನ್ನದೆ, ಮಟ ಮಟ ನೋಡುತ
ಇದ್ದವು ಮರದಲಿ ಕುಳಿತಲ್ಲೆ,
"ನಾಳೆಗೆ ತಿಂಡಿಯ ಈಗಲೆ ಹುಡುಕುವ
ಬನ್ನಿರಿ" ಎಂದಿತು ಕಪಿಯೊಂದು.

"ಹೌದೌದಣ್ಣಾ" ಎಂದೆನ್ನುತ ಎಲ್ಲವು
ಬಾಳೆಯ ತೋಟಕೆ ಹಾರಿದವು,
ತೋಟದಿ ಬಾಳೆಯ ಹಣ್ಣನು ನೋಡಲು
ಆಸೆಯು ಹೆಚ್ಚಿತು, ನೀರೂರಿ.

"ಸುಲಿದೇ ಇಡುವ ಆಗದೆ?" ಎಂದಿತು
ಆಸೆಯ ಮರಿಕಪಿಯೊಂದಾಗ;
"ಹೌದೌದೆ"ನ್ನುತ ಹಣ್ಣನು ಸುಲಿದವು,
ಕೈಯೊಳೆ ಹಿಡಿದು ಕುಳಿತಿರಲು.

"ಕೈಯಲ್ಲೇತಕೆ ಬಾಯೊಳಗಿಟ್ಟರೆ
ಆಗದೆ?" ಎಂದಿತು ಇನ್ನೊಂದು,
ಹಣ್ಣನು ಬಾಯಲಿ ಇಟ್ಟವು "ಜಗಿದೇ
ಇಡುವೆವು" ಎಂದಿತು ಮತ್ತೊಂದು.

ಜಗಿದೂ ಜಗಿದೂ, ನುಂಗಿದವೆಲ್ಲಾ
ಆಗಲೆ ಮುಗಿಯಿತು ಉಪವಾಸ.

[illegible] ಶಂಕರನಾರಾಯಣ ರಾವ್

ಅ. ಕೆಳಗಿನ ಪದಗಳು : ಅಕ್ಷರಗಳನ್ನು ಗಟ್ಟಿಯಾಗಿ ಓದಿ.

| | | | | |
|---|---|---|---|---|
| ಬಾಳೆ | ಸುಳಿ | ತೋಟ | ದಡ | ಉಪವಾಸ |
| ಒಡೆ | ಹುಡುಕು | ಬಾಯಿ | ಹಾರು | ಇನ್ನು |
| ಹಣ್ಣು | ಜಗಿ | ಆಸೆ | ನುಂಗು | ಹೆಚ್ಚು |

ಆ. ಓದಿ ತಿಳಿಯಿರಿ :

ಪಕ್ಕ – ಬದಿ, ಮಗ್ಗುಲು, ಹತ್ತಿರ.

ಉಪವಾಸ – ಏನನ್ನೂ ತಿನ್ನದೆ ಇರುವುದು.

ಕಪಿ – ಕೋತಿ.

ಆಸೆ – ಬಯಕೆ.

ಜಗಿ – ಅಗಿಯುವುದು.

ಸುಳಿ – ಸಿಪ್ಪೆರಹಿತ.

ನುಂಗು – ಸೇವಿಸು, ಬಾಯಿಯಿಂದ ಗಂಟಲೊಳಗೆ ಇಳಿಸುವುದು.

## ಅಭ್ಯಾಸ

ಅ) ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ :

೧. ಮಂಗಗಳು ಎಲ್ಲಿ ವಾಸಿಸುತ್ತಿದ್ದವು?

ಬಾಳೆಯ ತೋಟದ ಪಕ್ಕದ ಕಾಡಿನಲ್ಲಿ ವಾಸಿಸುತ್ತಿದ್ದವು

೨. ಮಂಗಗಳು ಯಾವ ತೋಟಕ್ಕೆ ಹಾರಿದವು?

ಮಂಗಗಳು ಬಾಳೆಯ ತೋಟಕ್ಕೆ ಹಾರಿದವು

೩. ಮಂಗಗಳು ಸುಲಿದ ಬಾಳೆಯ ಹಣ್ಣನ್ನು ಎಲ್ಲಿ ಇಟ್ಟುಕೊಂಡವು?

ಮಂಗಗಳು ಸುಲಿದ ಬಾಳೆಯ ಹಣ್ಣನ್ನು ಬಾಯಲ್ಲಿಟ್ಟುಕೊಂಡವು

೪. ಮುದಿಕಪಿ ಏನು ಹೇಳಿತು?

ಸುಲಿದೇ ಇಡುವ ಆಗದೆ ಎಂದಿತು ಮುದಿಕಪಿ

೫. ಮಂಗಗಳು ಉಪವಾಸವನ್ನು ಹೇಗೆ ಮುಗಿಸಿದವು?

ಬಾಳೆಹಣ್ಣನ್ನು ಜಗಿದೂ ಜಗಿದೂ ನುಂಗಿ ಉಪವಾಸ ಮುಗಿಸಿದವು

... ಆಗದೆ ಎಂದಿತು ಇನ್ನೊಂದು.

ಇ) 'ಅ' ಪಟ್ಟಿಯಲ್ಲಿನ ಅಂಶಗಳಿಗೆ 'ಆ' ಪಟ್ಟಿಯಲ್ಲಿನ ಅಂಶಗಳನ್ನು ಹೊಂದಿಸಿ ಬರೆಯಿರಿ :

| 'ಅ' | | 'ಆ' | |
|---|---|---|---|
| ೧. ಒಂದಾಗಿ ಬಾಳುವ | – | ೪ ಹಣ್ಣನು ಸುರಿದವು | ........................ |
| ೨. ನಾಳೆಗೆ ತಿಂದಿರು | – | ೩ ನೀರುಂಡು | ........................ |
| ೩. ಆಸೆಯು ಹೆಚ್ಚಿತು | – | ೧ ಮಾಡಿದವು | ........................ |
| ೪. ಹೋದೋದನ್ನು | – | ೨ ಈಗಲೆ ಹುಡುಕುವ | ........................ |

ಈ) ಈ ಪದಗಳನ್ನು ಉಚ್ಚರಿಸಿ :

೧. ಮಟಮಟ

೨. ಹೋದೋದು

೩. ಜಗಿದೂ ಜಗಿದೂ

ಟಿಕೆ :

೧. ಈ ಪದ್ಯದ ಸಾರಾಂಶವನ್ನು ಕಥೆಯ ರೂಪದಲ್ಲಿ ಹೇಳಿ.

೨. ಈ ಪದ್ಯವನ್ನು ಸಾಮೂಹಿಕವಾಗಿ ಹಾಡುತ್ತಾ ಅಭಿನಯಿಸಿ.

ರ್ಥ್ಯ : ಈ ಪದ್ಯ ಕಲಿಕೆಯ ಅನಂತರ ಏನು? ಮತ್ತು ಹೇಗೆ? ಎಂಬ ಪ್ರಶ್ನೆಗಳಿಗೆ ಉತ್ತರಿಸುವ ಸಾಮರ್ಥ್ಯ ಪಡೆಯುವಿರಿ.